ನಾಂದಿಪದ



# ಪುಸ್ತಕಗಳ ಜೀವಂತಿಕೆ

‘ಕೃತಿ ಅನ್ನುವುದು ಅಚ್ಚಾದ ಪುಸ್ತಕವಲ್ಲ. ಓದುಗ ಮನಸ್ಸು ಪ್ರತಿ ಓದಿನಲ್ಲೂ ಸೃಷ್ಟಿ ಮಾಡಿಕೊಳ್ಳುವ ಜೀವಂತ ವಸ್ತು.’ ಹಿರಿಯ ಬರಹಗಾರ ಓ.ಎಲ್. ನಾಗಭೂಷಣ ಸ್ವಾಮಿ ಅವರ ಈ ಮಾತು, ಪುಸ್ತಕ ಮತ್ತು ಓದಿನ ಶಕ್ತಿಯ ಬಗ್ಗೆ ಸಹೃದಯರ ಗಮನ ಸೆಳೆಯುವಂತಿದೆ. ಪುಸ್ತಕವನ್ನು ಮಾರಾಟದ ಉತ್ಪನ್ನವನ್ನಾಗಿ ಹಾಗೂ ಓದುಗರನ್ನು ಕೊಳ್ಳುಗರನ್ನಾಗಿ ನೋಡುವ ಪ್ರವೃತ್ತಿ ಎದ್ದು ಕಾಣಿಸುತ್ತಿರುವ ವರ್ತಮಾನದಲ್ಲಿ, ಪುಸ್ತಕವನ್ನು ನೋಡಬೇಕಾದುದು ಹೇಗೆ ಎನ್ನುವುದನ್ನು ಓಎಲ್‌ಎನ್ ಅವರ ಮಾತು ನಮ್ಮ ಗಮನಕ್ಕೆ ತರುವಂತಿದೆ. ಸಾಹಿತ್ಯ ಹಾಗೂ ಭಾಷೆಯ ಮೂಲಕ ವಾಸ್ತವವನ್ನು ಸೃಷ್ಟಿಸುವ ಕಲೆಯ ಬಗ್ಗೆ, ಲೇಖಕನ ಸಾಮಾಜಿಕ ಹೊಣೆಗಾರಿಕೆಯ ಬಗ್ಗೆ ಓಎಲ್‌ಎನ್ ಅವರು ಮೆಲುದನಿಯಲ್ಲಿ, ಅಪಾರ ಸ್ಪಷ್ಟತೆಯಲ್ಲಿ ಮಾತನಾಡಿರುವ ಸಂದರ್ಶನ ಈ ಸಂಚಿಕೆಯ ವಿಶೇಷಗಳಲ್ಲೊಂದು. ಈ ‘ಮಾತುಕತೆ’ ಕನ್ನಡದ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಪ್ರೇಮವನ್ನೂ ನಂಬಿಕೆಯನ್ನೂ ಉಂಟುಮಾಡುವಂತಿದೆ ಹಾಗೂ ಓದು– ಬರಹದ ಬಗ್ಗೆ ಹೊಸ ತಲೆಮಾರಿಗೆ ಕಿವಿಮಾತುಗಳನ್ನು ಹೇಳುವಂತಿದೆ. ಆಧುನಿಕ ಕನ್ನಡದ ಎರಡು ಅತ್ಯುತ್ತಮ ಅಭಿವ್ಯಕ್ತಿಗಳಾದ ಕುವೆಂಪು ಮತ್ತು ಮಾಸ್ತಿ ಅವರ ಸಂವಾದ ಮತ್ತು ಸಂಬಂಧವನ್ನು ಗುರ್ತಿಸುವ ಆಪ್ತಬರಹ ಈ ಸಂಚಿಕೆಯ ಮತ್ತೊಂದು ವಿಶೇಷ.

ಕನ್ನಡ ಸಾಹಿತ್ಯಕ್ಕೆ ಹೊಸ ಹೊಳಪು ಸೇರಿಸುವಂತೆ ಬರೆಯುತ್ತಿರುವ ಭಿನ್ನ ಹಾಗೂ ಹೊಸ ದನಿಗಳ ಕಥೆ, ಕವಿತೆ, ಪ್ರಬಂಧಗಳನ್ನು ಒಳಗೊಂಡಿರುವ ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆನ್ನುವ ನಂಬಿಕೆ ನಮ್ಮದು. ಓದುಗರ ಅಕ್ಕರೆ ಹಾಗೂ ಎಚ್ಚರದ ಕಿವಿಮಾತುಗಳು ‘ಮಯೂರ’ದ ನಿರಂತರ ಬದಲಾವಣೆಯ ಹಂಬಲಕ್ಕೆ ಒತ್ತಾಸೆಯಾಗಿವೆ.

**ಮಯೂರ ಬಳಗ**

editormy@mayura.co.in



ಕಲೆ: ಜಬೀವುಲ್ಲಾ ಎಂ. ಅಸದ್